# 20. ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆ ಹೊಳಲೂರು

ತುಂಗಭ್ರಾ ನದಿಯ ದಂಡೆಯ ಮೇಲೆ ಕೇಂದ್ರಿಕೃತವಾಗಿರುವ ಹೊಳಲೂರು ಗ್ರಾಮದ ಹೃದಯ ಭಾಗದಲ್ಲಿ 1920 ರಲ್ಲಿ ಸ್ಥಾಪಿತವಾಗಿರುವ ನಮ್ಮ ಸರ್ಕಾರಿ ಉರ್ದು ಪ್ರಾಥಮಿಕ ಶಾಲೆಯು ಹೊಳಲೂರು ಕ್ಲಸ್ಟರ್ ಶಿವಮೊಗ್ಗ ತಾಲ್ಲೂಕು, ಶಿವಮೊಗ್ಗ ಜಿಲ್ಲಾ ಕೇಂದ್ರದಿಂದ ಸರಿಸುಮಾರು 18ಕಿ.ಮೀ ದೂರದಲ್ಲಿದೆ. ಉತ್ತಮ ಬೋಧನಾ ಕೌಶಲ ಹೊಂದಿರುವ ನುರಿತ ಅನುಭವಿ 6 ಶಿಕ್ಷಕರು ಹಾಗೂ 88 ಮಕ್ಕಳನ್ನು 1 ರಿಂದ 8ನೇ ತರಗತಿಯವರೆಗೆ ನಮ್ಮ ಶಾಲೆಯು ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಹೊಂದಿರುತ್ತದೆ. ಶಾಲಾ ಚಟುವಟಿಕೆಗಳಲ್ಲಿ ಸದಾ ಪಾಲುದಾರರಾಗುವ ಉತ್ತಮ ಭಾಗೀದಾರರನ್ನು ಒಳಗೊಂಡ ಎಸ್.ಡಿ.ಎಂ.ಸಿ ಯನ್ನು ಹೊಂದಿರುವ ನಮ್ಮ ಶಾಲೆಯು ಉತ್ತಮ ಸಹಕಾರ ಮನೋಭಾವ ಹೊಂದಿರುವ ಗ್ರಾಮಸ್ಥರನ್ನು ಒಳಗೊಂಡಿದೆ.

ಪ್ರಸ್ತಕ ವರ್ಷದಲ್ಲಿ ನಮ್ಮ ಶಾಲಾ ಮಕ್ಕಳು ವಿವಿಧ ಆಟೋಟ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸಿ ಮಕ್ಕಳ ಯೋಗ್ಯತಾನುಸಾರವಾಗಿ ಪ್ರಸಸ್ತಿಗಳನ್ನು ಪಡೆದಿರುತ್ತಾರೆ.

ಪ್ರಸ್ತುತ ವರ್ಷದಲ್ಲಿ ನಮ್ಮ ಶಾಲೆಯ ನಲಿಕಲಿ ಕೊಠಡಿಯನ್ನು ಗ್ರಾಮ ಪಂಚಾಯ್ತಿ ಹೊಳಲೂರು ಹಾಗೂ ಎಸ್.ಡಿ.ಎಂ.ಸಿ ಯ ಸಹಕಾರದಿಂದ ಅಭಿವೃದ್ಧಿ ಪಡಿಸಿದ್ದು ಈ ಕೊಠಡಿಯು ಮಕ್ಕಳ ಕಲಿಕೆಗೆ ಪೂರಕವಾಗುವಂತೆ ನಲಿಕಲಿ ನಿಯಮದ ಆಶಯದಂತೆ ಸ್ವ–ಕಲಿಕೆ, ಸ್ವವೇಗದ ಕಲಿಕೆ ಮತ್ತು ಸಂತಸದಾಯಕ ಕಲಿಕೆಗೆ ಮಾದರಿಯಾಗಿದೆ. ನಮ್ಮ ಶಾಲಾ ಮಕ್ಕಳು ಈ ವಿದಾನದಲ್ಲಿ ಕಲಿಯುತ್ತಿದ್ದು ಕಲಿಕೆ ಫಲಕಾರಿಯಾಗಿದೆ.

ನಲಿಕಲಿ ಕೊಠಡಿ ಅಭಿವೃದ್ಧಿ ಪಡಿಸಲು ಇಲಾಖಾ ಅಧಿಕಾರಿಗಳ ಮಾರ್ಗದರ್ಶನ ಸಲಹೆ ಮತ್ತು ಸಹವೃತ್ತಿ ಬಾಂಧವರ ಅಭಿಪ್ರಾಯಗಳನ್ನು ಪಡೆದುಕೊಂಡು ಆಕರ್ಷಣೀಯವಾಗುವಂತೆ ಕಲಿಕೆಗೆ ಪೂರಕವಾಗುವಂತೆ ಮಕ್ಕಳಲ್ಲಿ ಸಂತಸ ಮೂಡುವಂತೆ ತಯಾರು ಮಾಡಲಾಗಿದ್ದು ನಮ್ಮ ಶಾಲೆಯು ಒಂದು ಉತ್ತಮ ಶಾಲೆಯಾಗಿ ರೂಪುಗೊಳ್ಳಲು ಮೇಲ್ಕಂಡ ಎಲ್ಲಾ ಘನ ವ್ಯಕ್ತಿಗಳ ಮಾರ್ಗದರ್ಶನ ಸಲಹೆ ಇನ್ನೂ ಹೆಚ್ಚಿನದಾಗಿ ಅಗತ್ಯವಿದೆ. ಎಂದು ನಿರೀಕ್ಷಿಸುತ್ತಾ ಈ ಸಾಧಾರಣ ಪ್ರಯತ್ನದ ಫಲ ನಿಮ್ಮ ಮುಂದೆ....

## I ವ್ಯಾನ್ ಸೌಲಭ್ಯ :-

ನಮ್ಮ ಶಾಲೆಯು ನರ್ಸರಿ ಶಾಲೆಯನ್ನು ಸಹ ಹೊಂದಿದ್ದು ಮಕ್ಕಳ ರಕ್ಷಣೆ ಸುರಕ್ಷತೆ ದೃಷ್ಟಿಕೋನದಿಂದ ಶಾಲೆಯ ಪೋಷಕರ ಮತ್ತು ಎಸ್.ಡಿ.ಎಂ.ಸಿ ಸಹಕಾರದೊಂದಿಗೆ ಶಾಲೆಗೆ ಮಕ್ಕಳನ್ನು ಕರೆತರಲು ಶಾಲೆಗೆ ವ್ಯಾನ್ ಸೌಲ್ಯಭ್ಯವನ್ನು ಒದಗಿಸಿಕೊಟ್ಟಿರುವುದು ಸಂತಸದಾಯಕವಾಗಿದೆ.




## II ಸಾಂಸ್ಕೃತಿಕ ಚಟುವಟಿಕೆ :-

ನಮ್ಮ ಶಾಲೆಯ ಮಕ್ಕಳು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸಿ ಶಾಲೆಗೆ ಮತ್ತು ಗ್ರಾಮಕ್ಕೆ ಗೌರವವನ್ನು ತಂದಿರುವುದು ತೃಪ್ತಿಯಾಗಿದೆ.



## III ವಾಲ್ ಸ್ಲೇಟ್ (WALL SLATE) :–

ಶಾಲೆಯ ನಲಿಕಲಿ ಕೊಠಡಿಯಲ್ಲಿ ಮಕ್ಕಳ ಸ್ವಕಲಿಕೆಗೆ ಪೂರಕವಾಗುವಂತೆ ಸೂಕ್ತ ಸ್ಥಳ, ಪ್ರತ್ಯೇಕ ಆಸನದೊಂದಿಗೆ ವೈಯಕ್ತಿಕ ಹೆಸರು ಬರೆದಿರುವ ಮಕ್ಕಳ ಕಲಿಕೆ ಕಪ್ಪುಹಲಗೆ ಮಾಡಿಸಿರುವುದು ಮಕ್ಕಳ ಕಲಿಕೆಗೆ WALL SLATE ಆಕರ್ಷಣೀಯವಾಗಿದೆ.



## IV ಕಲಿಕಾ ಸಾಮಗ್ರಿಗಳು (TLM) :–

ಮಕ್ಕಳ ಸ್ವ–ವೇಗದ ಕಲಿಕೆಗೆ ಸಹಕಾರಿಯಾಗುವಂತೆ ಪ್ರತಿ ವಿಷಯವಾರು, ಪ್ರತಿ ಮೈಲಿಗಲ್ಲುವಾರು, ಪ್ರತಿ ಮೈಲಿಗಲ್ಲುವಾರು, ಪ್ರತಿ ಮೆಟ್ಟಿಲುಗಳಿಗೆ ಅನುಗುಣವಾಗುವಂತೆ ಶಾಲೆಯ ನಲಿಕಲಿ ಬೋಧಕ ಶಿಕ್ಷಕರು ಹಾಗೂ ಮಕ್ಕಳು ತಯಾರಿಸಿರುವ ಕಲಿಕಾ ಸಾಮಗ್ರಿಗಳನ್ನು ಮಕ್ಕಳ ಕೈಗೆಟಕುವಂತೆ ಜೋಡಿಸಿರುವುದು ಕೊಠಡಿಯ ಅಂದವನ್ನು ಹೆಚ್ಚಿಸಿದೆ.



## V ಪೋಪೆಟ್ ಪರದೆ (POPPET SCREEN) :–

ಮಕ್ಕಳಿಗೆ ನೈಜ ಕಲಿಕೆ, ಅನುಭವದ ಕಲಿಕೆ, ಅಭಿನಯದ ಕಲಿಕೆಗೆ ಪೂರಕವಾಗುವಂತೆ ಶಾಲೆಯಲ್ಲಿ ಉತ್ತಮವಾದ ಪೋಪೆಟ್ ಪರದೆಯನ್ನು ಇದಕ್ಕೆ ಅನುಕೂಲವಾಗುವ ಪ್ರಾಣಿಗಳ ಚಿತ್ರಿಕೃತ ಮಾದರಿಗಳನ್ನು ಮತ್ತು ಪ್ಲಾಷ್ ಕಾರ್ಡ್‌ಗಳು ಹಾಗೂ ಕಡ್ಡಿ ಬೀಜಗಳನ್ನು ಹೊಂದಿರುವುದು ಆಹ್ಲಾದಕರವಾಗಿದೆ.




## VI ಕಾರ್ಡ್‌ಗಳು :–

1 ಮತ್ತು 2ನೇ ತರಗತಿಯ ಕಾರ್ಡ್‌ಗಳನ್ನು ಕ್ರಮಬದ್ಧವಾಗಿ ಮೆಟ್ಟಿಲು ಮೈಲಿಗಲ್ಲಿಗನುಸಾರವಾಗಿ ಜೋಡಿಸಲು ಮರದ ಅಡ್ಡ–ಲಂಭ ಸಾಲುಗಳುಳ್ಳ ಪೆಟ್ಟಿಗೆಯು ವಿದ್ಯಾರ್ಥಿಗಳ ಕೈಗೆಟುಕುವಂತೆ ಇಡಲಾಗಿದೆ. ಪ್ರಗತಿ ನೊಟಕ್ಕೆ ಅನುಗುಣವಾಗಿ ಮಕ್ಕಳೂ ಕಾರ್ಡ್‌ಗಳನ್ನು ಬಳಸುತ್ತಿದ್ದು ಕಲಿಕೆ ಫಲಪ್ರದವಾಗಿರುವುದು ಕಂಡು ಬಂದಿರುತ್ತದೆ.



## VII ಗುಂಪು ತಟ್ಟೆಗಳು :–

ಮಕ್ಕಳ ಸಂತಸದಾಯಕ ಕಲಿಕೆ ಅನುಕೂಲವಾಗುವಂತೆ ನಲಿಕಲಿ ನಿಯಮದಂತೆ ಕಲಿಕಾ ಗುಂಪು ತಟ್ಟೆಗಳನ್ನು ಕೊಠಡಿಯಲ್ಲಿ ನಿಗಧಿತ ಸ್ಥಳದಲ್ಲಿ ಅಲವಡಿಸಿಲಾಗಿದೆ. ಕಲಿಕೆಗೆ ಪೂರಕವಾಗಿರುವ ಇವುಗಳನ್ನು ಮಕ್ಕಳು ಸೂಕ್ತವಾಗಿ ಬಳಸಿಕೊಳ್ಳುತ್ತಿದ್ದಾರೆ.



## VIII ಪ್ರಗತಿನೋಟ :–

ಪ್ರತಿ ದಿನದ ಕಲಿಕೆಯು ಸದೃಢವಾಗಲು ಹಿಂದಿನ ಕಲಿಕೆಯು ಪುನರ್ಬಲನ ಹೊಂದಲು ಮುಂದಿನ ಕಲಿಕೆಗೆ ಸಹಕಾರಿಯಾಗಲು ನಲಿಕಲಿ ಆಶಯದಂತೆ ಪ್ರಗತಿನೋಟಗಳನ್ನು ಮಕ್ಕಳ ಕೈಗೆಟಕುವಂತೆ ಪ್ರದರ್ಶಿಸಲಾಗಿದೆ. ಪ್ರತಿ ದಿನವೂ ಮಕ್ಕಳು ತಾವೆ ಪ್ರಗತಿ ನೋಟದೊಂದಿಗೆ ಕಲಿಕೆಗೆ ಸಿದ್ಧರಾಗುತ್ತಿರುವುದು ತೃಪ್ತಿತಂದಿರುತ್ತದೆ.



## IX ಹವಮಾನ ನಕ್ಷೆ :-

ಮಕ್ಕಳಲ್ಲಿ ವಾತಾವರಣದ ಬದಲಾವಣೆಗಳನ್ನು ಅರ್ಥೈಸುವ ಸಲುವಾಗಿ ವಾಯುಗುಣದ ಪರಿಕಲ್ಪನೆ ಮುಡಿಸಲು ನಲಿಕಲಿ ಆಶಯದಂತೆ ತರಗತಿಗೆ ಅನುಗುಣವಾಗಿ ನಮೂದಿಸಲು ಹವಮಾನ ನಕ್ಷೆಯನ್ನು ಸೂಕ್ತ ಸ್ಥಳದಲ್ಲಿ ಮಕ್ಕಳಿಗೆ ದೊರಕುವಂತೆ ಇಡಲಾಗಿದೆ. ಮಕ್ಕಳು ತಾವೇ ದಿನದ ವಿವಿಧ ಹಂತಗಳ ಹವಮಾನ ಪರಿಶೀಲಿಸಿ ನಮೂದಿಸಿ ತಿಂಗಳ ಅಂತ್ಯದಲ್ಲಿ ಕ್ರೂಢೀಕರಿಸಿ ವಿಶ್ಲೇಷಿಸುವುದು ತೃಪ್ತಿ ತಂದಿರುತ್ತದೆ.



## X ಕಲಿಕಾಚಪ್ಪರ :-

ನಲಿಕಲಿ ನಿಯಮದಂತೆ ಕೊಠಡಿಯಲ್ಲಿ ಸುಮಾರು 6–7 ಅಡಿ ಎತ್ತರದಲ್ಲಿ ಮಕ್ಕಳೂ ತಯಾರಿಸಿದ ಕ್ರಾಫ್ಟ್ ಚಟುವಟಿಕೆಗಳು ಪ್ರಗತಿ ನೋಟಕ್ಕೆ ಅನುಸಾರವಾಗಿ ಪ್ರದರ್ಶನಗೊಂಡಿರುವುದು ಕೊಠಡಿಯ ಮೆರಗನ್ನು ಹೆಚ್ಚಿಸಿದೆ.



## XI ಮುಖವಾಡಗಳು :-

ನಲಿಕಲಿಯ ಸಂತಸದಾಯಕ ಕಲಿಕೆಗೆ ಅನುಕೂಲವಾಗುವಂತೆ ಕೊಠಡಿಯಲ್ಲಿ ವಿವಿಧ ಪ್ರಾಣಿಗಳ ಆಕಾರವನ್ನು ಹೊಂದುವ ಮುಖವಾಡಗಳನ್ನು ಶಾಲೆಯ ನಲಿಕಲಿ ಶಿಕ್ಷಕಿಯಾದ ಶ್ರೀಮತಿ ನೂರ್ ಫಾತೀಮಾರವರು ತಯಾರಿಸಿ ಮಕ್ಕಳಿಗೆ ಬಳಸಲು ನೀಡಿ ಕಲಿಕೆ ಸದೃಢವಾಗಲು ಸಹಕಾರಿಯಾಗಿರುವುದು ಸಂತಸವಾಗಿದೆ.



## XII ಅಭ್ಯಾಸ ಪುಸ್ತಕಗಳು :-

ಮಕ್ಕಳ ಗೃಹ ಪಾಠಕ್ಕೆ ಸೀಮಿತವಾಗಿರುವ ಅಭ್ಯಾಸ ಪುಸ್ತಕಗಳನ್ನು ಪ್ರತಿ ದಿನ ಮಕ್ಕಳಿಗೆ ನೀಡಿ ಮರು ದಿನ ಬೆಳಿಗ್ಗೆ ಅವುಗಳನ್ನು ಕ್ರಮಬದ್ಧವಾಗಿ ಜೋಡಿಸಲು ರ್‍ಯಾಕ್ ಸೌಲಭ್ಯವನ್ನು ಹೊಂದಿರುವುದು ಕೊಠಡಿಯ ಅಂದವನ್ನು ಹೆಚ್ಚಿಸಿದೆ ಅಭ್ಯಾಸ ಪುಸ್ತಕಗಳನ್ನು ಪ್ರತಿದಿನ ತಿದ್ದಿ ದಿನಾಂಕ ನಮೂದಿಸಲಾಗುತ್ತಿದೆ.



## XIII ಸೂಕ್ತ ಸ್ಥಳವಾವಕಾಶ :

ನಲಿಕಲಿ ಕೊಠಡಿಯೊಳಗೆ ಗುಂಪುಗಳ ನಿರ್ವಹಣೆಗೆ ಸ್ಥಳವನ್ನು ನಿಗಧಿಗೊಳಿಸಿದ್ದು ಮಕ್ಕಳು ಪ್ರಗತಿ ನೋಟಕ್ಕೆ ಅನುಗುಣವಾಗಿ ತಮ್ಮ–ತಮ್ಮ ಗುಂಪುಗಳಲ್ಲಿ ಚಟುವಟಿಕೆ ನಿರ್ವಹಿಸಲು ಸೂಕ್ತ ಸ್ಥಳಾವಕಾಶ ಮಾಡಿಕೊಡಲಾಗಿದೆ.



## XIV ಆಕರ್ಷಕ ನಲಿಕಲಿ ಕೊಠಡಿ :–

ನಲಿಕಲಿ ಬೋಧನಾ ವಿಧಾನದ ಎಲ್ಲಾ ಹಂತದ ಪರಿಕರಗಳನ್ನು ಹೊಂದಿರುವ, ಬಣ್ಣ ಲೇಪನದಿಂದ ಆಲಂಕೃತಗೊಂಡ ಕೊಠಡಿಯು ಮಕ್ಕಳ ಕಲಿಕೆಗೆ ಪೂರಕವಾಗಿರುವುದು ಸಂತಸದಾಯಕವಾಗಿದೆ.



## XV ಶಿಕ್ಷಕರ ದಿನಚರಿ :-

ಮಕ್ಕಳು ಪ್ರತಿದಿನ ನಿರ್ವಹಿಸಿದ ಚಟುವಟಿಕೆಗಳನ್ನು ಸಂಖ್ಯೆ ನಮೂದಿಸಲು ಶಿಕ್ಷಕರು ದಿನಚರಿ ಇಟ್ಟಿರುತ್ತಾರೆ. ಪ್ರಗತಿ ನೋಟ ಹಾಗೂ ದಿನಚರಿ ಮಾಹಿತಿಗೂ ತಾಳೆಗುತ್ತಿರುವುದು ದಾಖಲೆ ನಿರ್ವಹಣೆ ಉತ್ತಮ ನಿರ್ವಹಣೆಯಾಗುತ್ತಿರುವುದು ಕಂಡು ಬಂದಿದೆ.




## XVI ನಲಿಕಲಿ ಬೋಧನಾ ಶಿಕ್ಷಕರು :-

ನಲಿಕಲಿ ತರಬೇತಿಯನ್ನು ಹೊಂದಿರುವ ಶಿಕ್ಷಕರಿದ್ದು ಬೋಧನೆಯನ್ನು ಸಂಪೂರ್ಣ ನಲಿಕಲಿ ವಿಧಾನದಲ್ಲಿ ಮಾಡುತ್ತಿರುವುದು ಸಂತಸ ಶ್ರೀಮತಿ ನೂರ್ ಫಾತೀಮಾ ಶಿಕ್ಷಕರು ಉತ್ತಮ ಕಲಿಕೋಪಕರಣ ಮುಖವಾಡಗಳನ್ನು ತಯಾರಿಸಿದ್ದು ಇವುಗಳನ್ನು ಡಯೆಟ್ ಶಿವಮೊಗ್ಗದಲ್ಲಿ ನಡೆದ ಜಿಲ್ಲಾ ಹಂತದ ನಲಿಕಲಿ ತರಬೇತಿಯಲ್ಲಿ ಪ್ರದರ್ಶಿಸಿ ಡಯೆಟ್‌ನ ನಲಿಕಲಿ ನೋಡಲ್ ಅಧಿಕಾರಿಗಳು ಮತ್ತು ತರಬೆತಿ ನಿರತ ಶಿಕ್ಷಕರಿಂದ ಪ್ರಶಂಸೆಗೆ ಒಳಪಟ್ಟಿರುವುದು ಸಂತಸವಾಗಿದೆ.



# ಶಾಲಾ ವಸ್ತು ಸ್ಥಿತಿಯ ವಿಶ್ಲೇಷಣೆ

ಪ್ರಾರಂಭದಲ್ಲಿ ಶಾಲೆಯಲ್ಲಿ ಮಕ್ಕಳ ಕಲಿಕೆಗೆ ಪೂರಕವಾಗಲು ಕಲಿಕೋಪಕರಣಗಳು ಇರಲಿಲ್ಲ. ಇವುಗಳ ಕ್ರೋಢೀಕರಣಕ್ಕಾಗಿ ಇಲಾಖೆ ಪೋಷಕರಿಗೆ ಮನವಿ ಇಟ್ಟಾಗ ತುಂಬು ಹೃದಯದಿಂದ ಸಹಕರಿಸಿ ಮಕ್ಕಳ ಕಲಿಕೆಗೆ ಸಹಾಯ ಹಸ್ತ ನೀಡಿರುತ್ತಾರೆ. ಸ್ಥಳೀಯ ಸರ್ಕಾರವಾದ ಹೊಳಲೂರು ಗ್ರಾಮ ಪಂಚಾಯ್ತಿಯು ಸಹ ತಮ್ಮ ಅಳಿಲು ಸೇವೆಯ ಸಹಕಾರ ನೀಡಿರುವುದು ಶ್ಲಾಘನೀಯ.

ಶಾಲಾ ಮುಖ್ಯ ಶಿಕ್ಷಕಿಯಾದ ಶ್ರೀಮತಿ ಜಬೀನಾ ಬೇಗಂರವರು ಶಾಲಾ ಸಿಬ್ಬಂದಿ ಮತ್ತು ಮಕ್ಕಳು ಹಾಗೂ ಎಸ್.ಡಿ.ಎಂ.ಸಿ ಪೋಷಕರೊಂದಿಗೆ ಉತ್ತಮ ಶೈಕ್ಷಣಿಕ ಸಂಬಂಧ ಹೊಂದಿರುವುದು ಸಂತೋಷದ ವಿಷಯ. ಇವರು ಮಕ್ಕಳ ಕಲಿಕೆಗೆ ಹಾಗೂ ಶೈಕ್ಷಣಿಕ ಅಭಿವೃದ್ಧಿಗೆ ಸದಾ ಹಸನ್ಮುಖಿಯಾಗಿ ಎಲ್ಲರೊಂದಿಗೆ ಹೊಂದಿಕೊಂಡು ಕರ್ತವ್ಯ ನಿರ್ವಹಿಸುತ್ತಿರುವುದು ಶಾಲಾ ಇತರ ಬೋಧಕ ವರ್ಗದವರಿಗೆ ಪ್ರೇರಣೆಯಾಗಿದೆ.

ಶಾಲೆಯ ನಲಿಕಲಿ ಬೋಧಕ ಶಿಕ್ಷಕಿಯಾದ ಶ್ರೀಮತಿ ನೂರ್ ಫಾತೀಮಾರವರು 1–2ನೇ ತರಗತಿ ಮಕ್ಕಳಿಗೆ ನಲಿಕಲಿ ಬೋಧನಾ ವಿಧಾನ ಅವಳಡಿಸಿಕೊಂಡು ಬೋಧಿಸುತ್ತಿರುವುದು ಶ್ಲಾಘನೀಯವಾಗಿದೆ ಮುಖವಾಡ ಪೋಪೆಟ್ ಪರದೆ, ಕಲಿಕೋಪಕರಣ ದಾಖಲೆ ನಿರ್ವಹಣೆ ನಡೆಸಿಕೊಂಡು ಮಕ್ಕಳನ್ನು ಅನುಭವ ಸ್ವಕಲಿಕೆ ಸಂತಸ ಕಲಿಕೆಗೆ ಪ್ರೇರೇಪಣೆ ನೀಡುವುದು ತೃಪ್ತಿದಾಯಕವಾಗಿದೆ. ಇಂತಹ ಶಿಕ್ಷಕರನ್ನು ಹೊಂದಿರುವ ನಮ್ಮ ಶಾಲೆಯು ಸದಾ ಅವರಿಗೆ ಚಿರಋಣಿಯಾರುತ್ತದೆ.

ಈ ಶಾಲೆಯು ಇಂತಹ ಮುಖ್ಯ ಶಿಕ್ಷಕರು, ಸಹಶಿಕ್ಷಕರು, ಎಸ್.ಡಿ.ಎಂ.ಸಿ ಮತ್ತು ಪೋಷಕವೃಂದದೊಂದಿಗೆ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗೆ ಸಹಕಾರಿಯಗಿರುವುದು ಮುಂದಿನ ದೇಶದ ಶಿಲ್ಪಗಳನ್ನು ರೂಪಿಸಲು ಅನುಕೂಲವಾಗಿದೆ. ಇದೇ ರೀತಿಯಲ್ಲಿ ರಾಜ್ಯ ಜಿಲ್ಲಾ ಹಂತದ ಶಾಲೆಗಳು ಅಭಿವೃದ್ಧಿಯ ಪಥದತ್ತಸಾಗಲಿ ಹಾಗೂ ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆ ಹೊಳಲೂರು ಶಾಲೆಯಂತೆ ಮಾದರಿಯಾಗಿ ಹೊರಹೊಮ್ಮಲಿ ಎಂದು ಶಾಲೆಯ ಏಳಿಗೆಗೆ ಶ್ರಮಿಸಿದ ಎಲ್ಲರಿಗೂ ಅಭಿನಂದನೆಗಳನ್ನು ಸಲ್ಲಿಸೋಣ.....